# ಪ್ರಥಮ ಪ್ರಯತ್ನದಲ್ಲೇ ಯಶಸ್ಸು ಮಹಿಳಾ ಕಥಾಕೀರ್ತನ ಸಪ್ತಾಹ

● ಜಿ. ಆನಂದರಾಯ ಕಾಮತ್



ಸಂತ ಭದ್ರಗಿರಿ ಅಚ್ಯುತದಾಸರ ನಿಧನದಿಂದ ಕಥಾಕೀರ್ತನ ಕ್ಷೇತ್ರದ ವೈಭವವು ಇನ್ನೇನು ಇತಿಹಾಸ ಸೇರಿ ಹೋಯಿತು ಎಂದು ಅನೇಕ ಸಹೃದಯಿ ಕಲಾಸಕ್ತರು ಅಂದುಕೊಂಡಿದ್ದರು. ಆದರೆ ಸತ್ತ್ವಪೂರ್ಣವಾದ ಯಾವುದೇ ಕಲಾಪ್ರಕಾರದ ಪ್ರಸ್ತುತಿಯ ಪ್ರಭೆ ಕಾಲಾಂತರದಲಿ ಮ್ಲಾನವಾಗಬಹುದೇ ವಿನಾ, ಅಸ್ತಂಗತವಾಗಲಾರದು. ವಿವಿಧ ಕಾಲಘಟ್ಟದಲ್ಲಿ ಕಲೆಯ ಸತ್ತ್ವವೇ ಕಲಾವಿದರನ್ನು ತನ್ನೆಡೆಗೆ ಸೆಳೆದು ಕಲಾಪ್ರಕಾರವನ್ನು ಮತ್ತೆ ಮುನ್ನೆಲೆಗೆ ತರುವುದು. ಅಂತಹ ಕಲಾಪ್ರಕಾರಗಳಲ್ಲೊಂದು ಕಥಾಕೀರ್ತನೆ (ಹರಿಕಥೆ).

ಮಂಗಳೂರಿನ ಹರಿಕಥಾ ಪರಿಷತ್ ಕಳೆದ ಐದೂವರೆ ವರ್ಷಗಳಿಂದ ಈ ನಿಟ್ಟಿನಲ್ಲಿ ಸ್ತುತ್ಯಾರ್ಹ ಕೆಲಸ ಮಾಡುತ್ತಿದೆ. ಸ್ಥಾಪಕಾಧ್ಯಕ್ಷರಾದ ಕೆ. ಮಹಾಬಲ ಶೆಟ್ಟಿ (ದೇವಕೀತನಯ ಕೂಡ್ಲು) ಅವರ ಸಮರ್ಥ ನೇತೃತ್ವದಲ್ಲಿ ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಜಿಲ್ಲೆಗಳಲ್ಲಿ ನಿರಂತರ ಹರಿಕಥಾ ಸಪ್ತಾಹಗಳನ್ನು ಆಯೋಜಿಸುವ ಮೂಲಕ ಈ ಕಲೆಯ ಪುನರುತ್ಥಾನಕ್ಕೆ ಕಂಕಣಬದ್ಧವಾಗಿ ಸೇವೆಸಲ್ಲಿಸುತ್ತಿದೆ.

ಶಕ್ತಿನಗರದ ರಮಾ ಶಕ್ತಿ ಮಿಷನ್‌ನ ಆಶ್ರಯದಲ್ಲಿ ದೇವಿ ಶ್ರೀ ಶಮಾಂಬಿಕೆಯ ಸನ್ನಿಧಾನದಲ್ಲಿ ಮಹಿಳಾ ಕೀರ್ತನಕಾರರಿಂದಲೇ ಯಶಸ್ವಿಯಾಗಿ ನಡೆದ ಕೀರ್ತನ ಸಪ್ತಾಹ ಸುಧಾ ಪರಿಷತ್ತಿನ ಪ್ರಯತ್ನದಲ್ಲಿ ಒಂದು ಮಹತ್ವದ ಐತಿಹಾಸಿಕ ಹೆಜ್ಜೆಯೆನ್ನಬಹುದು. ಅಕ್ಟೋಬರ್ 21ರಿಂದ 27ರವರೆಗೆ ನಾಡಿನ ಹಿರಿಯ ಕಿರಿಯ ಮಹಿಳಾ ಕೀರ್ತನಕಾರರು ಪೌರಾಣಿಕ, ಐತಿಹಾಸಿಕ ಕಥಾನಕಗಳನ್ನು ಮನೋಜ್ಞವಾಗಿ ಪ್ರಸ್ತುತಪಡಿಸಿದರು. ಕಥಾಕೀರ್ತನ ಕ್ಷೇತ್ರದಲ್ಲಿ ಮಹಿಳೆಯರ ಸಾಧನೆಯು ಗೌಣವೇನಲ್ಲ ಎನ್ನುವುದನ್ನು ಸಾಬೀತುಪಡಿಸಿದರು.

ಶಾಸಕ ಜೆ. ಆರ್. ಲೋಬೊ ಸಪ್ತಾಹವನ್ನು ಉದ್ಘಾಟಿಸಿದರು. ಮೊದಲ ದಿನ ಯುವಕಲಾವಿದೆ ಹೊಸಬೆಟ್ಟಿನ ಅಶ್ವಿನಿ ಆಚಾರ್ ಶಿವಭಕ್ತೆ ಚೆನ್ನಕ್ಕ ಕಥೆಯನ್ನು ತನ್ನ ಯಕ್ಷಗಾನ ತಾಳಮದ್ದಳೆ ಶೈಲಿಯ ಮಾತುಗಾರಿಕೆಯ ಶೈಲಿಯಿಂದ ಸುಂದರವಾಗಿ ನಿರೂಪಿಸಿದರು. ನಿಷ್ಕಳಂಕ ಭಕ್ತಿಗೆ ಶಿವ ಸುಲಭದಲ್ಲಿ ಒಲಿಯುವನೇ ಹೊರತು, ಬಾಹ್ಯ ಆಡಂಬರಕ್ಕಲ್ಲ ಎಂಬ ಸಂದೇಶ ಸುಂದರವಾಗಿ ಮೂಡಿಬಂತು. ಸಂಗೀತದ ಕಡೆಗೆ ಈಕೆ ಇನ್ನಷ್ಟು ಗಮನ ಹರಿಸಿದಲ್ಲಿ ಭವಿಷ್ಯದಲ್ಲಿ ಪ್ರಬುದ್ಧ ಕಲಾವಿದೆಯಾಗುವುದರಲ್ಲಿ ಸಂಶಯವಿಲ್ಲ.

ಅರಳು ಪ್ರತಿಭೆ (ಒಂಬತ್ತರ ಬಾಲಕಿ) ಶ್ರದ್ಧಾ ಗುರುದಾಸ್, ತೆನಾಲಿ ರಾಮಕೃಷ್ಣನ ಕಥೆಯನ್ನು ಅಚ್ಚುಕಟ್ಟಾಗಿ ಪ್ರಸ್ತುತಪಡಿಸಿದಳು. ವಯಸ್ಸಿಗೆ ಮೀರಿದ ಪ್ರೌಢಿಮೆಯನ್ನು ಪ್ರಸ್ತುತಿಯಲ್ಲಿ ಗುರುತಿಸಬಹುದಾಗಿತ್ತು.

ಆದಿಶಕ್ತಿಯನ್ನೇ ನಗೆಗಡಲಲ್ಲಿ ತೇಲಿಸಿದ ಕಥೆ ಹೃದಯಂಗಮವಾಗಿತ್ತು. ಬಳಿಕ ತುಮಕೂರಿನ ಪ್ರಸಿದ್ಧ ಬಾಲಕಲಾವಿದೆ ಅನಘಾ ಪ್ರಸಾದ್ ಶ್ರೀನಿವಾಸ ಕಲ್ಯಾಣ ಕಥಾನಕವನ್ನು ವೃತ್ತಿಪರ ಕಲಾವಿದರಿಗೆ ಸರಿಮಿಗಿಲೆನಿಸುವಂತೆ ನಿರೂಪಿಸಿದ್ದು ಶ್ರೋತೃಗಳನ್ನು ಆಶ್ಚರ್ಯಚಕಿತರನ್ನಾಗಿಸಿತು. ನಿರರ್ಗಳ ನಿರೂಪಣೆ, ಪ್ರಸನ್ನವಾದ ಪ್ರಸ್ತುತಿ, ಅಮೋಘವಾದ ಸ್ಮರಣಶಕ್ತಿ ಈ ಕಲಾವಿದೆಯ ಆಸ್ತಿಯಾಗಿವೆ.

ಕುಂಬಳೆಯ ಕೀರ್ತನಕುಟೀರದ ಗರಡಿಯಲ್ಲಿ ಪಳಗಿದ ಇಬ್ಬರು ಯುವಕಲಾವಿದೆಯರು ಶಾಂಭವಿ ಕುಂಬ್ಳೆ ಮತ್ತು ವೈಭವಿ ಕುಂಬ್ಳೆ ಪ್ರಭಾವಶಾಲಿ ಪ್ರದರ್ಶನದಲ್ಲಿ ತಮಗಿರುವ ಪರಿಣತಿಯನ್ನು ಮೆರೆದರು. ಎಚ್ಚರ ತಪ್ಪಿದಾಗ ಸುಪ್ತ ವಾಸನೆಗಳು ಹೇಗೆ ಅಮಾಯಕರನ್ನೂ ಪ್ರಾರಬ್ಧದ ಸುಳಿಯೊಳಗೆ ಸಿಲುಕಿಸುತ್ತದೆ ಎಂಬ ನೀತಿಯನ್ನು ರುಕ್ಮಾಂಗದನ ಕಥೆ ವಿಷದಪಡಿಸುತ್ತದೆ ಎಂದು ಶಾಂಭವಿ ಮನಮುಟ್ಟುವಂತೆ ವಿವರಿಸಿದರು. ಎಷ್ಟೇ ಬಲಾಢ್ಯರಾದರೂ ಭಕ್ತಿಯ ಬಲದ ಮುಂದೆ ಅವರಾಟ ನಡೆಯಲಾರದೆಂದು ಅಂಬರೀಶನ ಕಥೆಯ ಮೂಲಕ ವೈಭವಿ ಬಹಳ ನೈಪುಣ್ಯತೆಯಿಂದ ಪ್ರಸ್ತುತಪಡಿಸಿದರು.

ಮಧುರ ಕಂಠದ ಮಂಜುಳಾ ರಾವ್, ಇರಾ ಅಕ್ಷಯಪಾತ್ರೆಯ ಕಥಾನಕವನ್ನು ಉನ್ನತ ಮಟ್ಟದ ಸಂಗೀತ ಹಾಗೂ ಧ್ವನಿಯ ಏರಿಳಿತದ ಪರಿಣಾಮಕಾರಿ ನಿರೂಪಣೆಯು ಸಮ್ಮಿಳಿತಗೊಂಡ ಪ್ರದರ್ಶನದ ಮೂಲಕ ಸ್ಮರಣೀಯವಾಗಿಸಿದರು. ಅವರು ಶುಭಪಂತುವರಾಳಿ ರಾಗದಲ್ಲಿ ಮೈದುಂಬಿ ಹಾಡಿದ ದ್ರೌಪದಿಯ ಆರ್ತಧ್ವನಿಯ ಪ್ರಾರ್ಥನೆಗೆ ಕೇಳುಗರೇ ಕಣ್ಣೊರೆಸಿಕೊಳ್ಳುವಂತಾಯಿತು. ಅಂತೂ ಶ್ರೇಷ್ಠಮಟ್ಟದ ಕಥಾಕೀರ್ತನ ಪ್ರದರ್ಶನಕ್ಕೆ ಅಂದಿನ ಶ್ರೋತೃವರ್ಗ ಸಾಕ್ಷಿಯಾಯಿತು.

ಕನ್ಯಾನದ ನಯನಗೌರಿ ಸೇರಾಜೆಯವರು ಶುಂಭಾಸುರವಧೆಯ ಕಥಾನಕವನ್ನು ಸಮರ್ಥವಾಗಿ ನಿರ್ವಹಿಸಿದರು. ದುಷ್ಟರಿಗೆ ಶಿಕ್ಷೆ ಶಿಷ್ಟರಿಗೆ ರಕ್ಷೆ, ಇದೇ ದೇವಿಯ ಆವಿರ್ಭಾವಕ್ಕೆ ಕಾರಣ ಎನ್ನುವ ತತ್ವವನ್ನು ಸರಳವಾಗಿ ಪ್ರಸ್ತುತಪಡಿಸಿದರು. ಮಾತಿನ ಧಾಟಿಯಲ್ಲಿ ಏಕತಾನತೆಯನ್ನು ಮೀರಿದ್ದೇ ಆದಲ್ಲಿ ಮುಂದಿನ ದಿನಗಳಲ್ಲಿ ಈ ಕಲಾವಿದೆಗೂ ಉತ್ತಮ ಭವಿಷ್ಯವನ್ನು ನಿರೀಕ್ಷಿಸಬಹುದಾಗಿದೆ.

ಕುಂಬಳೆಯ ಕೀರ್ತನಕುಟೀರದ ಮತ್ತಿಬ್ಬರು ವಿದ್ಯಾರ್ಥಿನಿಯರು ಎರಡು ಕಥೆಗಳ ಪ್ರೌಢ ಪ್ರಸ್ತುತಿ ಮಾಡಿದರು. ಧನ್ಯಾಶ್ರೀ ದಕ್ಷಯಜ್ಞ ಕಥೆಯಲ್ಲಿ ಶಿವನ ರೌದ್ರ ತಾಂಡವವನ್ನು ವರ್ಣಿಸುತ್ತಿದ್ದಂತೆ ಇಡೀ ಸಭೆಯೇ ಒಮ್ಮೆ ಕಂಪಿಸಿದಂತೆ ಭಾಸವಾಯಿತು. ತರುವಾಯ ದಿವ್ಯಶ್ರೀ ಶಿಬಿ ಚಕ್ರವರ್ತಿಯ ದಾನಶೂರತ್ವದ ಕಥೆಯನ್ನು ಮನೋಜ್ಞವಾಗಿ ಪ್ರತಿಪಾದಿಸಿದರು. ಸಂದರ್ಭೋಚಿತವಾದ ಹಾಡುಗಳು, ಹಾಡುಗಳಿಗೆ ಸೂಕ್ತವಾದ ರಾಗ ತಾಳಗಳ ಬಳಕೆ ಹರಿಕಥಾ ನಿರೂಪಣೆಯು ಕಳೆಗಟ್ಟಲು ಅತ್ಯಾವಶ್ಯಕ. ಈ ಇಬ್ಬರು ಕಲಾವಿದರು ಈ ಅಂಶವನ್ನು ಪರಿಣಾಮಕಾರಿಯಾಗಿ ಬಳಸಲು ಯಶಸ್ವಿಯಾದರು. ವೀರ, ಶಾಂತ, ದುಃಖ ರಸಗಳ ಅಭಿವ್ಯಕ್ತಿಯಲ್ಲಿ ಸಾಹಿತ್ಯ, ಸಂಗೀತಗಳ ಬಳಕೆ ಸಮರ್ಪಕವೆನಿಸಿತ್ತು.

ಕೊನೆಯ ದಿನ ಹರಿಕಥಾ ವಿದುಷಿ ಬೇಲೂರು ವಸಂತಲಕ್ಷ್ಮಿಯವರು ಲೋಕಕಲ್ಯಾಣಾರ್ಥವಾಗಿ ನಡೆದ ಸೀತಾರಾಮ ಕಲ್ಯಾಣದ ಕಥೆಯನ್ನು ಮನಮುಟ್ಟುವಂತೆ ಪ್ರಸ್ತುತಪಡಿಸಿದರು. ತುಂಬುಕಂಠದ ನಿರೂಪಣೆ, ಶ್ರುತಿ ಲೀನತೆ, ಅಸ್ಖಲಿತ ವಾಣಿ, ಸ್ಪಷ್ಟವಾದ ಉಚ್ಚಾರ, ಪ್ರಸಂಗಾವಧಾನತೆ, ಮಾತು ಹಾಗೂ ಗೀತೆಗಳ ಅಪೂರ್ವವೆನಿಸುವ ಮೈತ್ರಿ, ಇವೆಲ್ಲವುಗಳ ಸಮನ್ವಯತೆಯ ಪ್ರದರ್ಶನ ಶ್ರೋತೃಗಳನ್ನು ಮಂತ್ರಮುಗ್ಧರನ್ನಾಗಿಸಿತು.

ಏಳು ದಿನವೂ ಹಾರ್ಮೋನಿಯಂನಲ್ಲಿ ಉತ್ತಮ ಸಹಕಾರ ನೀಡಿದ ಯಜ್ಞೇಶ್ ಹೊಸಬೆಟ್ಟು, ಡಾ. ಎಸ್. ಪಿ. ಗುರುದಾಸ್, ಎಂ. ರಮೇಶ್ ಹೆಬ್ಬಾರ್, ಸತ್ಯನಾರಾಯಣ ಐಲ, ರವಿರಾಜ್ ಉಪ್ಪಿನಂಗಡಿ ಹಾಗೂ ವೈ. ಅನಂತಪದ್ಮನಾಭ ಭಟ್ ಅಭಿನಂದನಾರ್ಹರೂ. ಹಾಗೆಯೇ ತಬಲಾ ಸಾಥಿಯನ್ನು ನೀಡಿದ ಮಂಗಲ್‌ದಾಸ್ ಗುಲ್ವಾಡಿ, ಕೆ. ಸುರೇಶ್, ಜಗದೀಶ್ ಉಪ್ಪಳ, ರಾಕೇಶ್ ಹಾಗೂ ಪ್ರದೀಪ್ ಉಪಾಧ್ಯಾಯರ ಸೇವೆಯೂ ಸ್ಮರಣೀಯ. ಏಳು ದಿನಗಳ ಹರಿಕಥಾ ಸೇವೆಯನ್ನು ಪ್ರಾಯೋಜಿಸಿದ ಎನ್.ಡಿ. ನಾಗವೇಣಿ ಅಭಿನಂದನಾರ್ಹರೇ ಸರಿ. ಒಟ್ಟಾರೆಯಾಗಿ ಇಂತಹ ಒಂದು ಯಶಸ್ವೀ ಪ್ರಯತ್ನಕ್ಕೆ ಆಸರೆಯಾಗಿ ನಿಂತ ರಮಾ ಶಕ್ತಿ ಮಿಷನ್, ಮಂಗಳೂರು ಹಾಗೂ ಸಂಯೋಜಿಸಿದ ಹರಿಕಥಾ ಪರಿಷತ್, ಮಂಗಳೂರು ಇವರ ಸೇವೆ ಅಪೂರ್ವವೇ ಸರಿ. ❖

